# ಮೃಗೀಯ ಕೃತ್ಯಗಳಿಗೆ ಇಲ್ಲ ಅಂಕುಶ

15

ನಾಗರಿಕ ಸಮಾಜ ನಾಚಿಕೆಯಿಂದ ತಲೆತಗ್ಗಿಸಬೇಕಾದ ಹೆಣ್ಣುಮಕ್ಕಳ ಸಾಮೂಹಿಕ ಅತ್ಯಾಚಾರ ಪ್ರಕರಣಗಳಿಂದ 2021 ಹೊರತಾಗಿರಲಿಲ್ಲ. ಕರ್ನಾಟಕದ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿ ಗುಡ್ಡದಲ್ಲಿ ವಿದ್ಯಾರ್ಥಿನಿ ಮೇಲೆ ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ನಡೆದ ಸಾಮೂಹಿಕ ಅತ್ಯಾಚಾರದ ಘಟನೆ ಜನರ ಮನಸ್ಸಿನಲ್ಲಿ ಕಂಪನಗಳನ್ನುಂಟು ಮಾಡಿತು. ಈ ಘಟನೆಗೆ ಪ್ರತಿಕ್ರಿಯಿಸುತ್ತಾ, 'ರಾತ್ರಿಯ ವೇಳೆ ಯುವಕ–ಯುವತಿ ಆ ನಿರ್ಜನ ಪ್ರದೇಶಕ್ಕೆ ಹೋಗಬಾರದಿತ್ತು' ಎಂದು ಗೃಹ ಸಚಿವರು ಆಡಿದ ಅಸೂಕ್ಷ್ಮ ಮಾತಿಗೆ ವ್ಯಾಪಕ ಟೀಕೆಯೂ ವ್ಯಕ್ತವಾಯಿತು.

ಉತ್ತರಪ್ರದೇಶದ ಹತ್ರಾಸ್‌ನಲ್ಲಿ 20 ವರ್ಷದ ದಲಿತ ಯುವತಿಯ ಮೇಲೆ ಅತ್ಯಾಚಾರವೆಸಗಿ ಕೊಂದ ಪೈಶಾಚಿಕ ಕೃತ್ಯ 2020ರ ಸೆಪ್ಟೆಂಬರ್‌ನಲ್ಲಿ ನಡೆದಿತ್ತು. ಆ ಪ್ರಕರಣಕ್ಕೆ ವರ್ಷ ತುಂಬಿದರೂ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ದೊರಕಿಲ್ಲ.

'ರಾಷ್ಟ್ರೀಯ ಅಪರಾಧ ಬ್ಯೂರೋ' ವರದಿಗಳ ಪ್ರಕಾರ, ದೇಶದಲ್ಲಿ ಪ್ರತಿದಿನ 77 ಅತ್ಯಾಚಾರ ಪ್ರಕರಣಗಳು ಘಟಿಸುತ್ತಿವೆ. 2020ರಲ್ಲಿ ದೇಶದಲ್ಲಿ 28 ಸಾವಿರಕ್ಕೂ ಹೆಚ್ಚು ಅತ್ಯಾಚಾರ ಪ್ರಕರಣ ದಾಖಲಾಗಿದೆ. ರಾಜಸ್ಥಾನ, ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶಗಳು ಮಹಿಳೆಯರ ಅತ್ಯಾಚಾರ ಪ್ರಕರಣಗಳಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳು; ಕರ್ನಾಟಕ 14ನೇ ಸ್ಥಾನದಲ್ಲಿದೆ.

ಅತ್ಯಾಚಾರ ಪ್ರಕರಣಗಳ ಹೆಚ್ಚಳದ ಜೊತೆಗೆ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು ಹಾಗೂ ಜವಾಬ್ದಾರಿ ಸ್ಥಾನಗಳಲ್ಲಿರುವವರು ಹೆಣ್ಣುಮಕ್ಕಳ ಕುರಿತು ಲಘುವಾಗಿ ಮಾತನಾಡುವ ಚಾಳಿ ಹೆಚ್ಚಳವಾಗಿರುವುದನ್ನು ಗಮನಿಸಬೇಕು. ಕೊರೊನಾ ನಿಯಂತ್ರಣಕ್ಕಾಗಿ ವಿಧಿಸಲಾಗಿದ್ದ ಲಾಕ್‌ಡೌನ್ ಸಮಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ಸಂಖ್ಯೆ ಹೆಚ್ಚಾಗಿರುವುದನ್ನು ಕರ್ನಾಟಕ ಮಹಿಳಾ ಆಯೋಗ ತಿಳಿಸಿದೆ. ಹೆಣ್ಣುಮಕ್ಕಳ ಕುರಿತ ಲಘುವಾದ ಮಾತುಗಳಿಗೆ ಉದಾಹರಣೆಯಾಗಿ, 'ಭಾರತದ ಆಧುನಿಕ ಮಹಿಳೆಯರು ಒಂಟಿಯಾಗಿ ಇರಲು ಬಯಸುತ್ತಾರೆ. ಮದುವೆಯಾದರೂ ಮಕ್ಕಳಿಗೆ ಜನ್ಮ ನೀಡಲು ಬಯಸುವುದಿಲ್ಲ. ಬಾಡಿಗೆ ತಾಯ್ತನದಿಂದ ಮಕ್ಕಳನ್ನು ಪಡೆಯುತ್ತಾರೆ. ಅದು ಒಳ್ಳೆಯದಲ್ಲ' ಎಂದು ಆರೋಗ್ಯ ಸಚಿವ ಕೆ. ಸುಧಾಕರ್ ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೆನಪಿಸಿಕೊಳ್ಳಬಹುದು.






16

# ಲಸಿಕೆ: ಶತಕೋಟಿ ಡೋಸ್ ಮೈಲುಗಲ್ಲು

2021ರಲ್ಲಿ ಭಾರತವನ್ನು ಬಹುವಾಗಿ ಕಾಡಿದ್ದು ಕೋವಿಡ್‌ನ ಎರಡನೇ ಅಲೆ. ಕೋವಿಡ್ ಹರಡುವುದನ್ನು ತಡೆಗಟ್ಟಲು ಜನರು ಅನುಸರಿಸಬೇಕಿದ್ದ ಕ್ರಮಗಳು ಒಂದೆಡೆಯಾದರೆ, ಮತ್ತೊಂದೆಡೆ ಎಲ್ಲರಿಗೂ ಲಸಿಕೆ ನೀಡುವ ಜವಾಬ್ದಾರಿ ಸರ್ಕಾರದ ಮೇಲಿತ್ತು. 2021ರ ಜನವರಿ ಎರಡನೇ ವಾರದಲ್ಲಿ ದೇಶದ ವಯಸ್ಕರಿಗೆ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿತು.

ಲಸಿಕೆ ಅಭಿಯಾನದ ಹಾದಿ ಏರುಪೇರಿನಿಂದ ಕೂಡಿತ್ತು. ಲಸಿಕೆ ಲಭ್ಯವಾಗುವುದಕ್ಕೆ ಮೊದಲು ಇದ್ದ ಕಾತರ, ಲಸಿಕೆ ಲಭ್ಯವಾದ ನಂತರ ಇರಲಿಲ್ಲ. ಲಸಿಕೆಯ ಅಡ್ಡಪರಿಣಾಮಗಳ ಬಗ್ಗೆ ಆರೋಗ್ಯ ಸಚಿವಾಲಯ ಒಂದು ರೀತಿಯ ಹೇಳಿಕೆ ನೀಡಿದರೆ, ಲಸಿಕೆ ಅಭಿವೃದ್ಧಿಯ ಮೇಲ್ವಿಚಾರಣೆ ಹೊತ್ತಿದ್ದ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಬೇರೊಂದು ರೀತಿಯ ಹೇಳಿಕೆ ನೀಡುತ್ತಿತ್ತು. ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರು, 'ದೇಶಕ್ಕೆ ಕೋವಿಡ್ ಸಾರ್ವತ್ರಿಕ ಲಸಿಕೆ ಕಾರ್ಯಕ್ರಮದ ಅವಶ್ಯಕತೆ ಇಲ್ಲ' ಎಂದು ಘೋಷಿಸಿದ್ದರು.

ಪ್ರಾಯೋಗಿಕವಾಗಿ ಲಸಿಕೆ ಪಡೆದುಕೊಂಡ ಆರೋಗ್ಯ ಕಾರ್ಯಕರ್ತರಲ್ಲಿ ಕೆಲವರು ಮೃತಪಟ್ಟಿದ್ದು, ಲಸಿಕೆಯ ಬಗ್ಗೆ ಜನರಲ್ಲಿ ಅಪನಂಬಿಕೆ ಹುಟ್ಟುಹಾಕಿತು. ಈ ಅಪನಂಬಿಕೆಯನ್ನು ಹೋಗಲಾಡಿಸಲು ಕೇಂದ್ರ ಸರ್ಕಾರವು ಪೂರ್ಣಪ್ರಮಾಣದಲ್ಲಿ ಯತ್ನಿಸಲಿಲ್ಲ. ಈ ಗೊಂದಲಗಳ ಬಗ್ಗೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದವು. ಇವೆಲ್ಲವುಗಳ ಪರಿಣಾಮವಾಗಿ ಲಸಿಕೆ ಹಾಕಿಸಿಕೊಳ್ಳಲು ಜನರು ಹಿಂದೇಟು ಹಾಕಿದರು.

ಆದರೆ ಮಾರ್ಚ್ ಅಂತ್ಯದ ವೇಳೆಗೆ ತೀವ್ರತೆ ಪಡೆದ ಕೋವಿಡ್‌ನ ಎರಡನೇ ಅಲೆಯ ಭೀಕರತೆಯ ಎದುರು ಈ ಅಪನಂಬಿಕೆ ಇಲ್ಲವಾಯಿತು. ಜನರು ಲಸಿಕೆ ಹಾಕಿಸಿಕೊಳ್ಳಲು ಮುಗಿಬಿದ್ದರು. ಇದನ್ನು ನಿರೀಕ್ಷಿಸಿರದಿದ್ದ ಸರ್ಕಾರವು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿರಲಿಲ್ಲ. ಮುಖ್ಯವಾಗಿ ಪ್ರತಿದಿನ ಕೊಡಬೇಕಿದ್ದ ಲಸಿಕೆಯ ಡೋಸ್‌ಗಳಿಗಿಂತ, ಪೂರೈಕೆಯಾಗುತ್ತಿದ್ದ ಡೋಸ್‌ಗಳ ಸಂಖ್ಯೆ ಕಡಿಮೆ ಇತ್ತು.

ಜನವರಿಯಲ್ಲಿ ಸರ್ಕಾರವು ಲಸಿಕೆ ಕಾರ್ಯಕ್ರಮವನ್ನು ಆರಂಭಿಸಿದಾಗ, '2021ರ ಡಿಸೆಂಬರ್ ಅಂತ್ಯದ ವೇಳೆಗೆ ದೇಶದ 18 ವರ್ಷ ಮೇಲ್ಪಟ್ಟ 96 ಕೋಟಿ ಜನರಿಗೆ ಲಸಿಕೆಯ ಎರಡೂ ಡೋಸ್‌ಗಳನ್ನು ನೀಡುತ್ತೇವೆ' ಎಂದು ಸರ್ಕಾರ ಹೇಳಿತು. ಆದರೆ ಈ ಗುರಿಯನ್ನು ಮುಟ್ಟಲು ಅಗತ್ಯವಿದ್ದಷ್ಟು ಲಸಿಕೆಗಳು ತಯಾರಾಗುತ್ತಿರಲಿಲ್ಲ. ಅಲ್ಲದೆ ದೇಶದಲ್ಲಿ ತಯಾರಿಸಲಾಗಿದ್ದ ಲಸಿಕೆಯ ಕೋಟ್ಯಂತರ ಡೋಸ್‌ಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗಿತ್ತು. ಈ ಎಲ್ಲಾ ಕಾರಣಗಳಿಂದಾಗಿ ದೇಶದಲ್ಲಿ ಲಸಿಕೆಯ ಡೋಸ್‌ಗಳ ಕೊರತೆ ತೀವ್ರ ಸ್ವರೂಪ ಪಡೆಯಿತು. ಲಸಿಕೆ ಪೂರೈಸುವಂತೆ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ದುಂಬಾಲು ಬಿದ್ದವು.

ದೇಶದಲ್ಲಿ ಈಗ ನೀಡಲಾಗುತ್ತಿರುವ ಕೋವಿಡ್ ಲಸಿಕೆಯಲ್ಲಿ ಕೋವಿಶೀಲ್ಡ್‌ನದ್ದೇ ಸಿಂಹಪಾಲು. ಈ ಲಸಿಕೆಯನ್ನು ತಯಾರಿಸುವ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಆದಾರ್ ಪೂನಾವಾಲಾ ಅವರಿಗೆ ಬೆದರಿಕೆ ಕರೆಗಳು ಬಂದವು. ಅವರು ದೇಶಬಿಟ್ಟು ಹೊರಹೋಗಬೇಕಾದ ಸ್ಥಿತಿ ಎದುರಾಯಿತು. ಆಗ ಸರ್ಕಾರವು ಲಸಿಕೆ ರಫ್ತನ್ನು ಸ್ಥಗಿತಗೊಳಿಸಿತು. ನಂತರ ರಾಜ್ಯಗಳಿಗೆ ಲಸಿಕೆ ಪೂರೈಕೆ ಹೆಚ್ಚಿತು. ಪ್ರತಿದಿನ 20–40 ಲಕ್ಷ ಜನರವರೆಗೂ ಲಸಿಕೆಯ ಡೋಸ್‌ಗಳನ್ನು ನೀಡಲು ಸಾಧ್ಯವಾಯಿತು. ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದಂದು ಸರ್ಕಾರವು ಪಟ್ಟು ಹಿಡಿದು ಹೆಚ್ಚಿನ ಸಂಖ್ಯೆಯಲ್ಲಿ ಡೋಸ್‌ಗಳನ್ನು ನೀಡಿತು. ಒಂದೇ ದಿನ 2.5 ಕೋಟಿ ಡೋಸ್ ಲಸಿಕೆ ನೀಡಲಾಯಿತು. ಇದು ಒಂದು ದಾಖಲೆಯೂ ಆಯಿತು. ಆದರೆ ಆ ದಿನದ ಹಿಂದಿನ ದಿನಗಳು ಮತ್ತು ಮುಂದಿನ ದಿನಗಳಲ್ಲಿ ಲಸಿಕೆ ಕೊರತೆಯಾಯಿತು. ಹೀಗಿದ್ದೂ 279 ದಿನಗಳಲ್ಲಿ 100 ಕೋಟಿ ಡೋಸ್ ಲಸಿಕೆಯನ್ನು ನೀಡಿದ ಮೈಲುಗಲ್ಲನ್ನು ತಲುಪಲಾಯಿತು. ಈಗ ಡಿಸೆಂಬರ್ ಮಧ್ಯಂತರದ ವೇಳೆಗೆ 96 ಕೋಟಿ ಜನರಲ್ಲಿ ಶೇ 58ರಷ್ಟು ಜನರಿಗಷ್ಟೇ ಲಸಿಕೆಯ ಎರಡೂ ಡೋಸ್‌ಗಳನ್ನು ನೀಡಲಾಗಿದೆ.